**ಓ.ಎಸ್.ನಂಃ 20/2024**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 18.11.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ಚಿಕ್ಕಣ್ಣಮ್ಮ ನನ್ನ ತಾಯಿ. ಐಟಂ ನಂ.3 ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ನನ್ನ ತಾಯಿ ಮರಣ ಹೊಂದಿದ್ದಾರೆ. ನನ್ನ ತಾಯಿಯ ಜೀವಿತ ಕಾಲದಲ್ಲಿ ಪ್ರತಿವಾದಿ ಹೆಸರಿಗೆ 2 ಖಾತಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 2019 ರಲ್ಲಿ ನಾನು ಓ.ಎಸ್.ಸಂಖ್ಯೆಃ 65/2019 ದಾವೆ ಹೂಡಿದ್ದೆ ಎಂದರೆ ಸರಿ. ಸದರಿ ದಾವೆ ದಿಃ 23.09.2022 ರಲ್ಲಿ ವಜಾವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಆ ದಾವೆಯನ್ನು ನಾನೇ ಹೂಡಿದ್ದೆ. ನನಗೆ ಗೊತ್ತಾಗದ ಕಾರಣ ಆ ದಾವೆಗೆ ನಾನು ಹಾಜರಾಗಲಿಲ್ಲ. ಸುಮಾರು 2 ವರ್ಷಗಳ ಹಿಂದೆ ನನಗೆ ಆರೋಗ್ಯ ತಪ್ಪಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ಗುಂಡ್ಲುಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ವಿವಾಹವಾಗಿ 50 ವರ್ಷಗಳಾಗಿದೆ. ಆಗ ನನ್ನ ತಂದೆ ಬದುಕಿದ್ದರು. ನನ್ನ ತಂದೆ ಜೀವಿತಕಾಲದಲ್ಲಿ ಹಣದ ರೂಪದಲ್ಲಿ ನನಗೆ ಭಾಗ ಕೊಟ್ಟಿದ್ದರು ಎಂದರೆ ಸರಿಯಲ್ಲ. ಇತ್ತೀಚಿಗೆ ಆಸ್ತಿಗಳ ಮೌಲ್ಯ ಹೆಚ್ಚಾಗಿದೆ ಎಂದರೆ ಸರಿ. ನನ್ನ ತಂದೆಯ ಜೀವಿತ ಕಾಲದಲ್ಲಿ ನಾನು ಹಿಸ್ಸಾ ಪಡೆದಿದ್ದರು ಆಸ್ತಿಗಳ ಮೌಲ್ಯ ಹೆಚ್ಚಾದ ಕಾರಣ ಪ್ರತಿವಾದಿಗೆ ಮೋಸ ಮಾಡುವ ಸಲುವಾಗಿ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಣದ ರೂಪದಲ್ಲಿ ನನಗೆ ಭಾಗ ಕೊಟ್ಟಿದ್ದ ಕಾರಣ ಓ.ಎಸ್.ಸಂಖ್ಯೆಃ 65/2019 ರಲ್ಲಿ ಹಾಜರಾಗಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ